# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,

# ಆಳಂದ

## ಸಿ.ಸಿ. ನಂ. 434/2016

| | |
|---|---|
| ಪಿರ್ಯಾದಿ | ಕರ್ನಾಟಕ ಸರ್ಕಾರದ ಪರ |
| | ಪಿ.ಎಸ್.ಐ .ನಿಂಬರ್ಗಾ ಪೋಲಿಸ್ ಠಾಣೆ |

ವಿರುದ್ಧ

| | |
|---|---|
| ಆರೋಪಿತರು | 1. ಮಹಾದೇವಿ ಗಂಡ ಮಲ್ಲಿಕಾರ್ಜುನ ಧೂಳೆ |
| | ವಯಸ್ಸುಃ 60 ವರ್ಷ, ಸಾಃ ದೇವಂತಿಗಿ. |
| | 2. ಗಣಪತಿ ತಂದೆ ಮಲ್ಲಿನಾಥ ದೇಶಟ್ಟಿ |
| | ವಯಸ್ಸುಃ 30 ವರ್ಷ, ಸಾಃ ದೇವಂತಗಿ, |
| | 3. ಮಲ್ಲಮ್ಮ ಗಂಡ ಮಲ್ಲಿನಾಥ ದೇಶಟ್ಟಿ |
| | ವಯಸ್ಸುಃ50 ವರ್ಷ, ಸಾಃ ದೇವಂತಗಿ, |
| | 4. ಕಲ್ಯಾಣಿ ತಂದೆ ವಾಲಕು ಪವಾರ |
| | ವಯಸ್ಸುಃ30 ವರ್ಷ, ಸಾಃಝುಳಕಿ (ಕೆ) |
| | 5. ಶಾಲು  ತಂದೆ ವಾಲಕು ಪವಾರ, |
| | ವಯಸ್ಸುಃ25 ವರ್ಷ, ಸಾಃಝುಳಕಿ (ಕೆ) |
| | 6. ದಾದು ತಂದೆ ಸಜನು ಕಾಳೆ, |
| | ವಯಸ್ಸುಃ22 ವರ್ಷ, ಸಾಃಝುಳಕಿ (ಕೆ) |
| | 7. ದಾದು ತಂದೆ ಜಾಗೀರ ಕಾಳೆ |
| | ವಯಸ್ಸುಃ23 ವರ್ಷ, ಸಾಃಝುಳಕಿ (ಕೆ) |
| | 8. ಸೀನು @ ಸೀನ್ಯಾ ತಂದೆ ದಾದು, |
| | ವಯಸ್ಸುಃ19 ವರ್ಷ, ಸಾಃಝುಳಕಿ (ಕೆ) |

9. ಲಗಮು ತಂದೆ ಜೀನು ಕಾಳೆ,

ವಯಸ್ಸುಃ19 ವರ್ಷ, ಸಾಃಝುಳಕಿ (ಕೆ).

**<u>ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಗಳ ಹೇಳಿಕೆ</u>**

**ಪ್ರಶ್ನೆ 1** ನ್ಯಾಯಾಲಯದ ಮುಂದೆ ಅಭಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ 1 ರಿಂದ 9 ನೇ ಆರೋಪಿತರು. ಕೇಳಿದ್ದೇವೆ.

**ಪ್ರಶ್ನೆ 2.** ಸಿ.ಡಬ್ಲೂ. 1. ಪಿ.ಡಬ್ಲೂ. 3 ಗುರುಶಾಂತಪ್ಪಾ ತಂದೆ ಮಲ್ಲಪ್ಪಾ ಮಾಲಿಪಾಟೀಲ್ ಅವರು ತಮ್ಮ ನುಡಿ ಸಾಕ್ಷಿಯಲ್ಲಿ 2006 ನೇ ಇಸವಿಯಲ್ಲಿ ನನಗೆ ಹಣಕಾಸಿನ ಅಡಚಣೆ ಸಲುವಾಗಿ ಆರೋಪಿ ನಂ. 1 ರವರ ಬಳಿ ರೂ. 3 ಲಕ್ಷಗಳನ್ನು ಸಾಲವಾಗಿ ಪಡೆದೆನು. ಸದರಿ ರೂ. 3 ಲಕ್ಷ ಹಣವನ್ನು ಮೂರು ವರ್ಷದ ಒಳಗಾಗಿ ಅದರ ಬಡ್ಡಿ ಸಮೇತ ರೂ. 5,75,000/-ಗಳನ್ನು ನಾನು ಕೊಡಬೇಕಾಗಿತ್ತು. ಸದರಿ ಸಾಲಕ್ಕೆ ನಾನು ನನ್ನ ಜಮೀನನ್ನು ಅಡಮಾನ ಇಟ್ಟಿರುತ್ತೇನೆ. ಸದರಿ ಅಡಮಾನ ಪತ್ರವನ್ನು ಸಹ ಕೂಡ ನೊಂದಣಿ ಮಾಡಿಸಿರುತ್ತದೆ. ಅದರಂತೆ ನಾನು 2009 ರಲ್ಲಿ ರೂ. 5,75,000/-ಗಳನ್ನು ಆರೋಪಿ ನಂ. 1 ರವರ ಮನೆಗೆ ಕೊಡಲು ಹೋಗಿದ್ದೇನು. ಆಗ ಆರೋಪಿ ನಂ. 1 ನಾನು ನಿನಗೆ ಹಣ ಮರಿಳಿ ಕೊಡಲು ಕೊಟ್ಟಿಲ್ಲ. ಕಬ್ಜಾ ಸಲುವಾಗಿ ವಾಗ್ವಾದವಾಯಿತು. ನಂತರ 2015 ರಲ್ಲಿ ಆರೋಪಿತರು ನನಗೆ ಮತ್ತು ನನ್ನ ಮಗನಿಗೆ ಮತ್ತು ನನ್ನ ಧರ್ಮಪತ್ನಿಗೆ ಕಲ್ಲು ತೆಗೆದುಕೊಂಡು ಎದೆಗೆ ಮತ್ತು ಕುರುಪಿಯನ್ನು ತೆಗೆದುಕೊಂಡು ಒಗೆದರು. ನಂತರ ಅವರು ಪೋಲಿಸ್ ಠಾಣೆಗೆ ಹೋಗಿ ಫಿರ್ಯಾಧಿಯನ್ನು ಸಲ್ಲಿದ್ದೇವು. ನಂತರ ಪೋಲಿಸರು ಬಂದು ಪಂಚನಾಮೆಯನ್ನು ಜರುಗಿಸಿಕೊಂಡು ಹೋಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ, ನೀವೇನು ಹೇಳುತ್ತೀರಿ?

ಉತ್ತರಃ 1 ರಿಂದ 9 ನೇ ಆರೋಪಿತರು ಸುಳ್ಳು

**ಪ್ರಶ್ನೇ 3** ಃ ಸಿ.ಡಬ್ಲೂ.4. ಪಿ. ಡಬ್ಲೂ. 4, ಶ್ರೀದೇವಿ ಗಂಡ ಗುರುಶಾಂತಪ್ಪಾ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿತರು ಮತ್ತು ನಮ್ಮ ನಡುವೆ ಹಣಕಾಸಿನ ವ್ಯವಹಾರದ ಸಲುವಾಗಿ ನಮ್ಮ ಜಮೀನನ್ನು ಅಡಮಾನವಾಗಿಟ್ಟು ಹಣವನ್ನು ಪಡೆದುಕೊಂಡಿದ್ದೇವು. ಮಾತಿನ ಪ್ರಕಾರ ಮರಳಿ ಹಣವನ್ನು ನೀಡಿ ನಮ್ಮ ಜಮೀನನ್ನು ನಮಗೆ ಕೊಡುವ

ಮಾತಾಗಿತ್ತು ನಾವು ಹಣವನ್ನು ತೆಗೆದುಕೊಂಡು ಹೋಗಿ ಆರೋಪಿತರಿಗೆ ಕೊಡಲು ಹೋದಾಗ ಅವರು ಹಣವನ್ನು ಪಡೆದುಕೊಂಡಿರುವುದಿಲ್ಲ ಮತ್ತು ನಮ್ಮ ಜಮೀನನ್ನು ಬಿಟ್ಟು ಕೊಟ್ಟಿರುವುದಿಲ್ಲ. ನಾವು ನಮ್ಮ ಜಮೀನಿನಲ್ಲಿ ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಜಮೀನು ನಮ್ಮದ್ದು ಅವರದ್ದು ಎಂದು ಹೇಳಿ ಹೊಡಪೆಟ್ಟು ಆಗಿರುತ್ತದೆ. ಚಾಸಾ 1 ರವರಿಗೆ ಹೊಡೆಯುತ್ತಿದ್ದರು ನಾವು ಬಿಡಿಸಲು ಹೋದಾಗ ನನಗೂ ಹೊಡೆದಿರುತ್ತಾರೆ. ನಂತರ ಬಾಯಿ ಬಾಯಿ ಜಗಳವಾಗಿರುತ್ತದೆ ಅಂತಾ ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 9 ನೇ ಆರೋಪಿತರು. ಸುಳ್ಳು.

**ಪ್ರಶ್ನೆ 4-** ಸಿ.ಡಬ್ಲೂ.5, ಪಿ. ಡಬ್ಲೂ. 5 ಸುನೀಲ ತಂದೆ ಪ್ರಶಾಂತಪ್ಪ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾವು ಆರೋಪಿತರ ಬಳಿಯಿಂದ ಹಣವನ್ನು ಬಡ್ಡಿಗಾಗಿ ಪಡೆದುಕೊಂಡಿದ್ದೆವು, ಅದರ ಜಾಮೀನಿಗಾಗಿ ಮುದ್ದತ್ತ ರಜಿಸ್ಟರ ಮಾಡಿಕೊಟ್ಟಿರುತ್ತೇನೆ, ನಾನು ಜಮೀನಿನಲ್ಲಿದ್ದಾಗ ಆರೋಪಿತರು ನಮ್ಮ ಜಮೀನಿಗೆ ಟ್ರಾಕ್ಟರ ತೆಗೆದುಕೊಂಡು ಬಂದು ಹೊಡಪೆಟ್ಟು ಮಾಡಿರುತ್ತಾರೆ.ನಾನು ಇವತ್ತಿನವರೆಗಾದರೂ ಹಣ ಮರಳಿ ಆರೋಪಿತರಿಗೆ ನೀಡಲು ತಯಾರಿದ್ದೇನೆ ಆದರೆ ಆರೋಪಿತರು ತೆಗೆದುಕೊಳ್ಳಲು ತಯಾರಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 9 ನೇ ಆರೋಪಿತರು. ಸುಳ್ಳು.

**ಪ್ರಶ್ನೆ 5-** ಸಿ.ಡಬ್ಲೂ.6, ಪಿ. ಡಬ್ಲೂ. 6 ಪ್ರಕಾಶ ತಂದೆ ಭೀಮಶಾ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು ಚಾಸಾ 1 ರವರ ಜಮೀನನ್ನು ಪಾಲಿಗೆ ಬಿಟ್ಟು ಬೆಳೆ ಮಾಡಿರುತ್ತೇನೆ. ಆ ಸಮಯದಲ್ಲಿ ಈ ಘಟನೆ ನಡೆದಿರುತ್ತದೆ. ನನ್ನ ಕೌಲು ಮುಗಿಯಿತು, ಅವರ ಜಗಳವಾಗಿರುತ್ತದೆ. ನಾನು ಅವರ ಜಮೀನನ್ನು ಮಾಡುವುದನ್ನು ಬಿಟ್ಟುರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 9 ನೇ ಆರೋಪಿತರು. ಸುಳ್ಳು.

**ಪ್ರಶ್ನೆ 6-** ಸಿ.ಡಬ್ಲೂ.11, ಪಿ. ಡಬ್ಲೂ. 11 ಡಾಃ ಸಲೇಹ ತಂದೆ ಎಮ ಡಿ ಯುನಸಖಾನ್ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿಃ 17-10-2015 ರಂದು ಮಧ್ಯಾಹ್ನ 3.15 ಗಂಟೆಗೆ ಚಾಸಾ 6 ರವರು ಹಲ್ಲೆಯ ಹಿನ್ನಲೆಯ ಮೇಲೆ ಆಸ್ಪತ್ರೆಗೆ

ನಿಂಬರ್ಗಾ ಪೋಲಿಸರ ಮನವಿಯ ಮೇರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಿ ನೋಡಿದಾಗ ಅವರಿಗೆ ಎಡಗಾಲಿನ ಮೇಲಿನ ತೆರಿಚಿದ ಗಾಯ ಮತ್ತು ಲ್ಯಾಕುರೇಟೆಡ್ ಗಾಯ 0.1*0.2ಎಮ.ಎಮ ಇದ್ದು, ಬಲಗಾಲಿನ ಮೇಲೆ ತೆರಚಿದ ಗಾಯ ಮತ್ತು ಎಡಗೈಯ ಬೆರಳಿನ ಮೇಲೆ ತೆರಚಿದ ಗಾಯ ನನ್ನ ಪ್ರಕಾರ ಸದರಿ ಗಾಯಗಳು ಯಾವುದಾದರು ಚೂಪಾದ ವಸ್ತುವಿನಿಂದ ಆಗಬಹುದು. ಸದರಿ ಗಾಯಗಳು ಸಾದಾ ಗಾಯಗಳು ಇರುತ್ತವೆ. ಸದರಿ ಗಾಯಗಳು 10 ರಿಂದ 12 ಗಂಟೆಗಳೊಳಗೆ ಆಗಿರಬಹುದು.

ಅದೇ ದಿನ ಚಾಸಾ 7 ರವರು 3.30 ಗಂಟೆಗೆ ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ನಿಂಬರ್ಗಾ ಪೋಲಿಸರ ಮನವಿಯ ಮೇರೆಗೆ ಬಂದಿದ್ದು, ಅವರನ್ನು ಪರೀಕ್ಷಿಸಿ ನೋಡಿದಾಗ ಅವರಿಗೆ ಬಲಗೈಯ ಮೇಲೆ ತೆರಚಿದ ಗಾಯ ಆಗಿತ್ತು. ನನ್ನ ಪ್ರಕಾರ ಸದರಿ ಗಾಯವು ಗಟ್ಟಿಯಾದ ಮತ್ತು ಮೊಂಡಾದ ವಸ್ತುಗಳಿಂದ ಆಗಿರಬಹುದು. ಸದರಿ ಗಾಯವು ಸಾದಾ ಗಾಯ ಇರುತ್ತದೆ. ಸದರಿ ಗಾಯ 10 ರಿಂದ 12 ಗಂಟೆಗಳೊಳಗೆ ಆಗಿರಬಹುದು ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 9 ನೇ ಆರೋಪಿತರು. ಸುಳ್ಳು.

**ಪ್ರಶ್ನೆ 7-** ಸಿ.ಡಬ್ಲೂ.13, ಪಿ. ಡಬ್ಲೂ. 12 ಸಂತೋಷ ತಂದೆ ಶಂಕರ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿಃ 18-10-2015 ರಂದು ಚಾಸ-12 ರವರ ಕಡೆಯಿಂದ ಕಡತವನ್ನು ಪಡೆದುಕೊಂಡು ತನಿಖೆ ಕೈಗೊಂಡು ಅದೇ ದಿನ ಚಾಸಾ 2 ಮತ್ತು 3 ರವರ ಸಮಕ್ಷಮ ಗುನ್ನ ಸ್ಥಳದ ಪಂಚನಾಮೆಯನ್ನು 12.00 ರಿಂದ 1.00 ಗಂಟೆಯವರೆಗೆ ಜರುಗಿಸಿರುತ್ತೇನೆ. ಅದೇ ದಿನ ಚಾಸ-4 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 01-01-2016 ರಂದು ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಹಾಜರಾದ ಮೇರೆಗೆ ಸೂಕ್ತ ಜಾಮೀನನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 01-06-2016 ರಂದು ಚಾಸಾ 6 ಮತ್ತು 7 ರವರ ಗಾಯಯ ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 9 ನೇ ಆರೋಪಿತರು. ಸುಳ್ಳು.

**ಪ್ರಶ್ನೆ 8-** ಸಿ.ಡಬ್ಲೂ.12, ಪಿ. ಡಬ್ಲೂ. 13 ಗುರುಬಸಪ್ಪಾ ತಂದೆ ಚಂದ್ರಶಾ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿಃ 17-10-2015 ರಂದು 4.30 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸಾ 1 ರವರು ನೀಡಿದ ದೂರಿನ ಆಧಾರದ ಮೇಲೆ ಠಾಣಾ ಗುನ್ಹಾ ಸಂಖ್ಯೆ 122/2015 ಅಂತಾ ದಾಖಲಿಸಿಕೊಂಡು ಪ್ರ.ವ.ವ.ವರದಿಯನ್ನು ನಮ್ಮ ಸಿಬ್ಬಂದಿಯ ಮುಖಾಂತರ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟು ಮುಂದಿನ ತನಿಖೆಗಾಗಿ ಚಾಸಾ 13 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 9 ನೇ ಆರೋಪಿತರು. ಸುಳ್ಳು.

ಪ್ರಶ್ನೆ 9- ನೀವು ಏನನ್ನಾದರೂ ಹೇಳ ಬಯಸುವೀರಾ?

ಉತ್ತರಃ 1 ರಿಂದ 9 ನೇ ಆರೋಪಿತರು. ಏನು ಇಲ್ಲಾ

ಪ್ರಶ್ನೆ 10- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ 1 ರಿಂದ 9 ನೇ ಆರೋಪಿತರು. ಇಲ್ಲಾ.

(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ನ್ಯಾಯಾಲಯ ಆಳಂದ.